STATEMENT

Re : Roads and Bridges in the State

SRI QUMARUL ISLAM.—Sir, I had sent a Call Attention notice...

MR. SPEAKER.—The Hon'ble Minister for Public Works will make a statement.

SRI KAGODU THIMMAPPA (Minister for Public Works) —Sir, I wish to make the following statement regarding roads and bridges.

Roads form the life line of the development of country. Considering the requirements of the State, there is a keen need to undertakea large number of rural roads and bridges all over the State to provide requisite infra- structural base for development.

It was not possible to accommodate all these keenly felt fresh works under the Roads and Bridges during the year 1981-82 due to inadequate provision made in the budget estimate. A large number of representations are received from the Members parliament, Legislative Assembly, Legislative Council and other local leaders to take up the Rural Project Works very urgently. These representations have been carefully considered by the Government and in addition detailed discussions have been held with these Leaders. Based on these discussions, a programme of fresh works numbering 514 as Silver Jubilee Roads and Bridges at an estimated cost of Rs. 1350 lakhs is sanctioned during the year 1981-82.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಗಳು ಏನೋ ಪಾಲಿಸಿ ಸ್ಟೇಟ್‌ಮೆಂಟ್ ಮಾಡುತ್ತಾರೆ ಎಂದು ತಿಳಿದುಕೊಂಡಿದ್ದೆವು. ಸಿಲ್ವರ್ ಜೂಬಿಲಿ ರೋಡ್...

ಶ್ರೀ ಕಾಗೋಡು ತಿಮ್ಮಪ್ಪ.—ಕಳೆದ ಸಾರಿ ಬೇಡಿಕೆಗಳ ಬಗ್ಗೆ ಚರ್ಚೆ ಮಾಡತಕ್ಕ ಕಾಲದಲ್ಲಿ ನಾವು ಒಂದು ಭರವಸೆ ನೀಡಿದ್ದೆವು. ಆ ಕೆಲಸವನ್ನು ಕಾರ್ಯಗತ ಮಾಡಿದ್ದೇವೆ ಎಂಬ ಅಂಶವನ್ನು ಸದನದ ಗಮನಕ್ಕೆ ತರುವ ದೃಷ್ಟಿಯಿಂದ ಹೇಳಿದ್ದೇವೆ.

ಶ್ರೀ ಎಂ. ಸಿ. ಬಸಪ್ಪ.—೧೩ ಕೋಟಿ ೫೦ ಲಕ್ಷ ರೂಪಾಯಿಗಳನ್ನು ಯಾವ ವರ್ಷಕ್ಕೆ ಕೊಟ್ಟಿದೆ ಮತ್ತು ಅದನ್ನು ಯಾವಾಗ ಖರ್ಚು ಮಾಡುತ್ತೀರಿ?

ಶ್ರೀ ಹೆಚ್. ಡಿ. ದೇವೇಗೌಡ.—ದುಡ್ಡು ಕೊಟ್ಟಿಲ್ಲ.

ಶ್ರೀ ಅಜೀಜ್ ಸೇಠ್,—ದುಡ್ಡು ಕೊಟ್ಟಿಲ್ಲ, ಬಜೆಟ್ಟಿನಲ್ಲಿ ನಮೂದಿಸಿದ್ದೇವೆ ಎಂದು ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಆ ಕೆಲಸಗಳನ್ನು ವಂಜೂರು ಮಾಡಿದಮೇಲೆ ಕೆಲಸ ಪ್ರಾರಂಭ ಮಾಡುತ್ತೇವೆ. ಕೆಲಸ ಆಗಬೇಕಾದುದು ಮುಖ್ಯ ದುಡ್ಡಿನ ವಿಷಯ ಕಟ್ಟಿಕೊಂಡು ಏನಾಗಬೇಕಾಗಿದೆ?

ಶ್ರೀ ಆಜೀಜ್ ಸೇಠ್.—ದುಡ್ಡನ್ನು ಏತಕ್ಕೆ ಖರ್ಚು ಮಾಡಿಲ್ಲ?

ಶ್ರೀ ಕೆ. ಹೆಚ್. ಶ್ರೀನಿವಾಸ್.— ಮೂಗಿಗೆ ತುಪ್ಪ ಹಚ್ಚಿದ್ದಾರೆ. ನಾಲಿಗೆ ಉದ್ದ ಮಾಡಿನೆಕ್ಕಿ ಕೊಳ್ಳುವುದು ನಮ್ಮ ಕೆಲಸ.

ಶ್ರೀ ಕಾಗೋಡು ತಿಮ್ಮಪ್ಪ.—ಕಳೆದ ಎರಡು ಮೂರು ವರ್ಷಗಳಿಂದ ರಾಜ್ಯದಲ್ಲಿ ಸಾಕಷ್ಟು ಕೆಲಸಗಳನ್ನು ತೆಗೆದುಕೊಂಡಿಲ್ಲ, ಆದ್ದರಿಂದ ಈ ವರ್ಷ ತೆಗೆದುಕೊಂಡು ಪ್ರಾರಂಭ ಮಾಡುತ್ತಿದ್ದೇವೆ.

ಎಲ್ಲಾ ಕೆಲಸಕ್ಕೂ ಮಂಜೂರಾತಿ ಸಿಕ್ಕಿ ಕೆಲಸ ಪ್ರಾರಂಭವಾಗುತ್ತದೆ. ಆದರೆ ಬಗ್ಗೆ ಅನುಮಾನ ಇಟ್ಟು ಕೊಳ್ಳಬೇಕಾದ ಅಗತ್ಯ ಇಲ್ಲ ಎಂಬ ಮಾತನ್ನು ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ಬಿ ವಿ. ಕಕ್ಕಿಲಾಯ.—ರಜತೋತ್ಸವದ ಸೇತುವೆ ಮತ್ತು ರಸ್ತೆಗಳನ್ನು ಮಾಡುತ್ತೀರಲ್ಲ ಅದು ಯಾವಯಾವುದು ಎಂಬ ಪಟ್ಟಿ ಇದ್ದರೆ ಕೊಡುತ್ತೀರಾ? ಈ ಕೆಲಸ ಕೆಲವೇ ಕಡೆ ಆಗಿ ಬೇರೆ ಕಡೆ ಆಗಬೇಕಾದರೆ ಪಜ್ರಮಹೋತ್ಸವದವರೆಗೂ ಕಾಯಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ. —ರಾಜ್ಯದ ಎಲ್ಲಾ ಕಡೆಗೂ ಸಮಾನವಾಗಿ ಕೆಲಸ ಆಗುವ ರೀತಿಯಲ್ಲಿ ಹಂಚಿಕೆ ಮಾಡಿದ್ದೇವೆ.

ಶ್ರೀ ಎಸ್. ಆರ್ ಬೊಮ್ಮಾಯಿ.—ಹಿಂದೆ ನಿಮ್ಮ ನಿಮ್ಮ ಮತಕ್ಷೇತ್ರಗಳಲ್ಲಿ ಯಾವ ಯಾವ ಕೆಲಸ ಆಗಬೇಕು ಎಂಬ ಬಗ್ಗೆ ಆದ್ಯತೆ ಕೊಡಿ ಎಂದು ಕೇಳಿದ್ದರು. ಅದಕ್ಕೆ ನಾವು ಇಂಥಿಂಥ ಕೆಲಸ ಆಗಬೇಕೆಂದು ಹೇಳಿದ್ದೆವು. ಆದರೆ ಆ ಕೆಲಸಗಳು ಆಗಲೇ ಇಲ್ಲ ಆದ್ದರಿಂದ ಯಾವ ಯಾವ ರಸ್ತೆ ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ವಿವರ ಕೊಡಿ, ಇಲ್ಲದಿದ್ದರೆ ತಾವೇನೋ ಲೆಕ್ಕ ಹಾಕಿಕೊಂಡಿರುತ್ತೀರಿ ಮಾಡುವಾಗ ಯಾವುದನ್ನೋ ಮಾಡುತ್ತೀರಿ. ಈಗ ನೀವು ಮಾಡಬೇಕೆಂದಿರುವ ಕೆಲಸಕ್ಕೆ ಬರತಕ್ಕ ಬಜೆಟ್ಟಿನಲ್ಲಿ ಹಣ ಪ್ರಾವಿಷನ್ ಮಾಡುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ.—ಹೌದು.

ಶ್ರೀ ಕೆ. ರಾಮಭಟ್.—ನಾವೆಲ್ಲಾ ಇಂಥಿಂಥ ಕೆಲಸ ಆಗಬೇಕೆಂದು ಪಟ್ಟಿ ಕೊಟ್ಟಿದ್ದೆವು. ಅದು ಬಜೆಟ್ಟಿನಲ್ಲಿ ಸೇರಲಿಲ್ಲ. ಒಟ್ಟಾಗಿ ಒಂದೂಂದು ಲಕ್ಷ ರೂಪಾಯಿ ಕೊಡುತ್ತೇವೆ ಎಂದು ಹೇಳಿದ್ದರು. ಆದರೆ ಒಂದು ಸಾವಿರವನ್ನೂ ಕೊಟ್ಟಿಲ್ಲ. ಆದ್ದರಿಂದ ಅದೇರೀತಿ ಪುನರಾವರ್ತನೆ ಆಗದಂತೆ ನೋಡಿ ಕೊಳ್ಳಿ. ಕೊಟ್ಟ ಮಾತನ್ನು ಉಳಿಸಿಕೊಳ್ಳಿ.

ಶ್ರೀ ಕಾಗೋಡು ತಿಮ್ಮಪ್ಪ.—ರಸ್ತೆ ಆದರೆ 1/3 ಇರಬೇಕಾಗುತ್ತದೆ. ಸೇತುವೆ ಆದರೆ 1/5 ಇರಬೇಕಾಗುತ್ತದೆ, ಆ ಕಾರಣದಿಂದ ನಿಂತಿದೆ. ಬೇರ ಕಾರಣಕ್ಕೆ ಅಲ್ಲ. ಈಗ ಆ ರೀತಿ ಇಲ್ಲದಿದ್ದರೂ ಕೂಡ ಆ ಕೆಲಸಗಳನ್ನು ೮೨-೮೩ನೇ ಸಾಲಿನಲ್ಲಿ ಹಣ ಒದಗಿಸಿ ಖಂಡಿತ ಮಾಡುತ್ತೇವೆ.

REPRESENTATIONS

Re : Statement made by the Chief Minister of Tamil nadu regarding Sharing of Cauvery Water

ಶ್ರೀ ಹೆಚ್. ಡಿ. ದೇವೇಗೌಡ.—(ಹೊಳೇನರಸೀಪುರ) ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿ ಪಡೆದು ಒಂದು ವಿಷಯವನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ತಮಿಳುನಾಡಿನ ಮಾನ್ಯ ಮುಖ್ಯಮಂತ್ರಿಗಳು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡತಕ್ಕ ಕಾಲದಲ್ಲಿ ''ಕಾವೇರಿ ನದಿ ವಿವಾದದ ಬಗ್ಗೆ ಮಾತುಕತೆ ಕುಸಿದುಬಿದ್ದಿದೆ, ನನಗೆ ಕರ್ನಾಟಕದ ಜೊತೆ ಈ ವಿಷಯದ ಬಗ್ಗೆ ಸಮಾಲೋಚನೆ ಮಾಡಲು ವಿಶ್ವಾಸವಿಲ್ಲ, ಕರ್ನಾಟಕದವರು ತುಂಬಾ ಮೋಸ ಮಾಡಿದ್ದಾರೆ'' ಎಂಬ ಮಾತನ್ನು ಹೇಳಿ ಈ ವಿಷಯವನ್ನು ಕೇಂದ್ರಕ್ಕೆ ತಿಳಿಸುತ್ತೇನೆ ಎಂಬ ಮಾತನ್ನೂ ಹೇಳಿದ್ದಾರೆ. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಈ ಬಗ್ಗೆ ವರದಿ ಬಂದಿದೆ. ಕರ್ನಾಟಕದಿಂದ ತುಂಬಾ ಮೋಸವಾಗಿದೆ ಎಂಬ ಮಾತನ್ನು ಅವರು ಹೇಳಿದ್ದಾರೆ. ಆದರೆ ನಾನು ತುಂಬಾ ವಿಷಾದದಿಂದ ಹೇಳುತ್ತೇನೆ, ಮೋಸವಾಗಿರತಕ್ಕದ್ದು ಕರ್ನಾಟಕದ ಜನತೆಗೆ ಅನ್ಯಾಯ ದ್ರೋಹ ಆಗಿರತಕ್ಕದ್ದು ಕರ್ನಾಟಕದ ಜನತೆಗೆ. ಕರ್ನಾಟಕ ಜನತೆಯು ತಲೆ ಹೊಡೆದು ಅವರು ಆರ್ಥಿಕ ಸೌಧದನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ, ಮಾಡಿದ್ದಾರೆ. ೨೯ ಲಕ್ಷ ಎಕರೆಗೆ ಬೇಕಾಗುವಷ್ಟು ನೀರಾವರಿ ಅಭಿವೃದ್ಧಿಯನ್ನು ಅವರು ಮಾಡಿಕೊಂಡಿದ್ದಾರೆ. ನಾವು ಕೇವಲ ೬-೭ ಲಕ್ಷದಷ್ಟೂ ನೀರಾವರಿ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ನಮ್ಮ ಎಲ್ಲಾ ಯೋಜನೆಗಳನ್ನು ಸಂಪೂರ್ಣಗೊಳಿಸಿದರೂ ಕೂಡ ತಮಿಳುನಾಡಿನವರು ಏನು ನೀರನ್ನು ಉಪಯೋಗಿಸಿಕೊಂಡಿದ್ದಾರೋ ಅದರ ಮೂರನೇ ಒಂದು ಭಾಗದಷ್ಟು ನೀರನ್ನೂ ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂಬುದು ನಿರ್ವಿವಾದ, ಅಂದರೆ ಆ ಬೇಸಿನ್‌ನಲ್ಲಿ ಮೂರನೇ